**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಅರಸೀಕೆರೆ**

ಓ ಎಸ್ ನಂ. 36/2009 ಡಿ ಡಬ್ಲೂಃ1

**ದಿಃ 15.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ಜಾವಗಲ್ ನಲ್ಲಿ ನನ್ನ ಮತವನ್ನು ಹಾಕುತ್ತೇನೆ. ನನ್ನ ಆದಾರ್ ಗುರುತಿನ ಚೀಟಿಯಲ್ಲಿ ನನ್ನ ವಿಳಾಸ ಜಾವಗಲ್ ಗ್ರಾಮ ಆಗಿರುತ್ತದೆ. ನಾನು ಪಡಿತರ ಚೀಟಿಯನ್ನು ಹೊಂದಿರುವುದಿಲ್ಲ. ನನ್ನ ಆದಾರ್ ಗುರುತಿನ ಚೀಟಿಯನ್ನು ನಾನು ಮುಂದಿನ ಮುದ್ದತಿನ ದಿನದಂದು ಸಿಕ್ಕಿದರೆ ಹಾಜರು ಪಡಿಸುತ್ತೇನೆ. ವಾದ ಪತ್ರದಲ್ಲಿ ತೋರಿಸಿದ ನನ್ನ ವಿಳಾಸ ಸರಿಯಿದೆ. ನಾನು ಈ ಹಿಂದೆ ಸಿದ್ದೇಗೌಡ ಮತ್ತು ತಿಮ್ಮೇಗೌಡರವರ ವಿರುದ್ಧ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ವಾದಿ ಅಥವಾ ಪಂಚಾಯಿತಿದಾರರಾಗಲಿ ಪಕ್ಷಗಾರರಾಗಿರಲಿಲ್ಲ ಎಂದರೆ ಸರಿ. ಪ್ರಸ್ತುತ ದಾವೆ ದಾವಾ ಆಸ್ತಿಯಲ್ಲಿ ಡೈರಿ 50 ವರ್ಷಗಳಿಂದ ಇದೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯಲ್ಲಿ ಇರುವ ಡೈರಿಗೆ 15 ವರ್ಷಗಳ ಹಿಂದೆ ಸರ್ಕಾರದಿಂದ ಪರವಾನಿಗೆ ಪಡೆದು ಜಾವಗಲ್ ಗ್ರಾಮ ಪಂಚಾಯತಿಯವರು ಕೂಲಿಂಗ್ ಪ್ಲಾಂಟ್ ಅಳವಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಡೈರಿಯಲ್ಲಿ 600-700 ಜನ ಸದಸ್ಯರು ಇದ್ದಾರೆ ಎಂದರೆ ಸರಿಯಲ್ಲ. ಸದರಿ ಡೈರಿಗೆ ಗ್ರಾಮದ ಜನರೆಲ್ಲರೂ ಹಾಲನ್ನು ಹಾಕುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಪಿ 4 ರಂತೆ ಪಂಚಾಯಿತಿದಾರರು ಜಾವಗಲ್ ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ಡೈರಿ ಕಟ್ಟಲು ಪರವಾನಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಡೈರಿಯು ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ಸೇರಿದ ಡೈರಿ ಎಂದರೆ ಸರಿಯಲ್ಲ. ಸದರಿ ಡೈರಿಯು ಹಾಲು ಉತ್ಪಾದಕ ಸಹಕಾರ ಸಂಘದ ಅಂದಿನ ಅಧ್ಯಕ್ಷರಾದ ಸಿದ್ದೇಗೌಡ ರವರ ವಿರುದ್ಧ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವಾ ಆಸ್ತಿಯಲ್ಲಿರುವ ಡೈರಿ ಸಾರ್ವಜನಿಕರಿಗೆ ಸೇರಿದ ಜಾಗವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯು 30 ವರ್ಷಗಳ ಹಿಂದೆ ಸರ್ಕಾರದಿಂದ ನನಗೆ ಮಂಜೂರಾದ ಆಸ್ತಿ ಎಂದು ನುಡಿಯುತ್ತಾರೆ. ಇದೆ ನ್ಯಾಯಾಲಯದಲ್ಲಿ ನಾನು ದಾವಾ ಆಸ್ತಿಯ ಸ್ವಾಧೀನ ನನಗೆ ಕೊಡಿಸಬೇಕು ಎಂದು ಅಮಲ್ಜಾರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ ಸರ್ಕಾರದಿಂದ ನನಗೆ ಮಂಜೂರು ಆದ ನಂತರ ಸದರಿ ಮಂಜೂರು ರದ್ದು ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸಿದ್ದೇಗೌಡರ ವಿರುದ್ಧ ಸಲ್ಲಿಸಿರುವ ದಾವೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸಿದ್ದೇಗೌಡರ ವಿರುದ್ಧ ಸಲ್ಲಿಸಿದ್ದ ದಾವೆಯಲ್ಲಿ ಸಿದ್ದೇಗೌಡರವರು ಸದರಿ ದಾವಾ ಆಸ್ತಿಯು ನನಗೆ ಸೇರಿದ್ದು ಅಲ್ಲ ಡೈರಿಗೆ ಸೇರಿದ್ದು ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಡೈರಿಯನ್ನು 1989 ರಲ್ಲಿಯೇ ಕಟ್ಟಿದ್ದು ಅದರ ಸುತ್ತಾ ಕಟ್ಟಡವನ್ನು ನಿರ್ಮಿಸಿದ್ದು, ಸದರಿ ಆಸ್ತಿಯಲ್ಲಿ ನಾನು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯನ್ನು ಪಂಚಾಯಿತಿಗೆ ಸೇರಿಸಬೇಕು ಎಂದು ಆದೇಶವಾಗಿದೆ ಎಂದರೆ ಸರಿಯಲ್ಲ. ಈಗ ದಾವಾ ಆಸ್ತಿಯನ್ನು ಪಂಚಾಯಿತಿ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ನಾನು ಡೈರಿಯಲ್ಲಿ ಸ್ವಾಧೀನಾನುಭವದಲ್ಲಿ

ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹೊಂದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇಲ್ಲದೇ ಇದ್ದರೂ ಸಹಾ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 37 ರ ದಾಖಲೆ ಪ್ರಕಾರ ದಾವಾ ಆಸ್ತಿ ಖಾತೆಯು ಪಂಚಾಯಿತಿ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ18.01.2003ರ ಪಾಲು ವಿಭಾಗ ಪತ್ರ ತೋರಿಸಿ ಕೇಳಲಾಗಿ ಸದರಿ ದಾಖಲೆ ಪ್ರಕಾರ ನನಗೆ ಸಿ ಷೆಡ್ಯೂಲ್ ಎಂದು ನಮೂದು ಇರುವ ಸ.ನಂ. 21/1ಬಿ1 ರಲ್ಲಿ 1 ಎಕರೆ 5 ಗುಂಟೆ ಜಮೀನು ಸ.ನಂ.98 ರಲ್ಲಿ 26 ಗುಂಟೆ ಜವೀನು, ಸ.ನಂ.71/2ರಲ್ಲಿ 1 ಎಕರೆ 12 ಗುಂಟೆ ಜಮೀನು, ನಿವೇಶನ ನಂ.96 ರಲ್ಲಿ 89X31 ಅಡಿ ಜಾಗ, ನಿವೇಶನ ನಂ.96 ರಲ್ಲಿ 69X41 ರಂತೆ ಒಟ್ಟು 6 ಸ್ವತ್ತುಗಳು ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗ ಪತ್ರದ ಅದಾರದ ಮೇಲೆ ನನಗೆ ಬಂದ ಅಸ್ತಿಗಳ ಪಹಣಿ ಷತ್ರಿಕೆಗಳಲ್ಲಿ ಖಾತೆಯು ನನ್ನ ಹಸೆರಿಗೆ ಆಗಿರುತ್ತದೆ ಎಂದರೆ ಸಾಕ್ಷಿ ಅವು ಹಳೆ ಯ ಪಹಣಿಗಳು ಎಂದು ನುಡಿಯುತ್ತಾರೆ. ಸದರಿ ಪಹಣಿಯಲಿನ ಆಸ್ತಿಗಳನ್ನು ನಾವು ಬೇರೆಯವರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಸದರಿ ಆಸ್ತಿಗಳನ್ನು ಹೊಂದಿದ್ದರೂ ಸಹಾ ಸರ್ಕಾರಕ್ಕೆ ನಾನು ಯಾವುದೇ ಆಸ್ತಿ ಹೊಂದಿಲ್ಲ ನಿರಾಶ್ರಿತ ಎಂದು ಸುಳ್ಳು ಹೇಳಿ ಸರ್ಕಾರದಿಂದ ದಾವಾ ಆಸ್ತಿಯನ್ನು ಮಂಜೂರು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಾಲು ವಿಭಾಗ ಪತ್ರದ ಮೂಲಕ ಬಂದ ಆಸ್ತಿಗಳ 2025-26 ನೇ ಸಾಲಿನ ಪಹಣಿಗಳಲ್ಲಿಯೂ ಸಹಾ ಖಾತೆ ನನ್ನ ಹೆಸರಿಗೆ ಇವೆ ಎಂದರೆ ಸಾಕ್ಷಿಯು ನಾನು ನೋಡುವುದಿಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹಾ ದಾವಾ ಆಸ್ತಿಯು ನನ್ನ ಮಾಲಿಕತ್ವ ಇದೆ ಎಂದು ನಾನು ಪಂಚಾಯಿತಿ ವಿರುದ್ದ ಅಥವಾ ಡೈರಿ ವಿರುದ್ದ ಘೋಷಣಾತ್ಮಕ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಆದ್ದರಿಂದ ನಾನು ದಾವಾ ಆಸ್ತಿಯ ಮಾಲೀಕತ್ವ ಮತ್ತು ಸ್ವಾಧೀನಾನುಭವ ಹೊಂದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಅರಸೀಕೆರೆ

**<u>ಪ್ರಧಾನ  ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಅರಸೀಕೆರೆ</u>**

ಓ ಎಸ್ ನಂ.    ಡಿಡಬ್ಲೂಃ1

**<u>ದಿಃ 25.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ  ಪರ  ವಕೀಲರಿಂದಃ**

ಈ ದಿನ ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳೆಂದು ಗುರುತಿಸಲಾಯಿತು.

| | |
|---|---|
| ನಿಡಿ 1 | ಅಸಲು  ದಾವಾ  ನಂ. 18/98 ರ ಆದೇಶ ಪುಟದ ದೃಢೀಕೃತ ಪ್ರತಿ |

**ಮುಂದುವರೆದ ಮುಖ್ಯ ವಿಚಾರಣೆಃ** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ,  ಅರಸೀಕೆರೆ